



ರಾತ್ರಿ ಸದ್ದಿಲ್ಲದೆ ನಿಮ್ಮ ಬೆಡ್‌ರೂಮಿಗೆ ಯಾರಾದರೂ ನುಸುಳಿ ದೇಹವನ್ನು ಮೃದುವಾಗಿ ಸ್ಪರ್ಶಿಸಿ, ನಿಮ್ಮ ಕೋಮಲ ಕೆನ್ನೆಗೊಂದು ಹೂ ಮುತ್ತನ್ನಿತ್ತರೆ ಹೆಚ್ಚು ರೋಮ್ಯಾಂಟಿಕ್ ಆಗುವ ಅವಶ್ಯಕತೆಯೇನೂ ಇಲ್ಲ. ತಕ್ಷಣ ಎದ್ದು ಕಾಯಿಲ್ ಹಚ್ಚಿ ಸೊಳ್ಳೆಯನ್ನೋಡಿಸಿ!

★★★

ಪತ್ನಿ: ನಿನ್ನೆ ರಾತ್ರಿ ನೀವು ನಿದ್ದೆಯಲ್ಲಿ ನನಗೇಕೆ ಆ ಪಾಟ ಬಯ್ಯುತ್ತಿದ್ದಿರಿ?
ಪತಿ: ನಿನಗೆಲ್ಲೋ ತಪ್ಪೆಣಿಕೆಯಾಗಿದೆ.
ಪತ್ನಿ: ಅದೆಂಥಾ ತಪ್ಪು?
ಪತಿ: ಅದೇ... ನಾನು ನಿದ್ದೆಯಲ್ಲಿದ್ದೇನೆಂದು ನೀನು ಭಾವಿಸಿದ್ದು...!

★★★

ಅಧ್ಯಾಪಕ: 'ಭಾರೀ ಬಿರುಗಾಳಿಯ ಜೊತೆಗೆ ಮಳೆಯಾಗುತ್ತಿದೆ' ಈ ವಾಕ್ಯದ ಭವಿಷ್ಯತ್ ಕಾಲ ಹೇಳಿ.
ಪುಟ್ಟ: ಕೆಲವೇ ನಿಮಿಷಗಳಲ್ಲಿ ಕರೆಂಟ್ ಹೋಗುವುದು...!

★★★

ಜಡ್ಜ್: ನಾನು ನಿನ್ನನ್ನು ಈ ಮೊದಲು ಎಲ್ಲೋ ನೋಡಿದ್ದೇನೆ...
ಆರೋಪಿ: 'ಸಾಹೇಬ್ರೇ... ನಾನು ಮುಜ್ರಾ ನೃತ್ಯಗೃಹದಲ್ಲಿ ತಬಲಾ ಬಾರಿಸುತ್ತೇನೆ.'
ನ್ಯಾಯಾಲಯದಲ್ಲೀಗ ಸ್ಮಶಾನ ಮೌನ ಆವರಿಸಿತು!

★★★

ಸಂತಾ: ನಮಗೆ ಮತ್ತು ಒಂಟೆಗಳಿಗೆ ಇರುವ ವ್ಯತ್ಯಾಸವೇನು?
ಬಂತಾ: ಒಂಟೆಗಳು 1 ವಾರದ ತನಕ ಏನೂ ಕುಡಿಯದೆ ಕೆಲಸ ಮಾಡಬಲ್ಲವು ಮತ್ತು ನಾವು 1 ವಾರದ ತನಕ ಏನೂ ಕೆಲಸ ಮಾಡದೆ ಕುಡಿಯಬಲ್ಲೆವು!

(ಸಂಗ್ರಹ) **ರಮಣ್ ಶೆಟ್ಟಿ ರೆಂಜಾಳ್, ಮುಂಬೈ**

### ಗಿಡವಾಗಿ ಬಗ್ಗದ್ದು...

ಶಿಕ್ಷಕರು: 'ಗಿಡವಾಗಿ ಬಗ್ಗದ್ದು ಮರವಾಗಿ ಬಗ್ಗೀತೇ?' ಎಂಬ ಗಾದೆ ಮಾತು ಸರ್ವಕಾಲಕ್ಕೂ ಸತ್ಯ.
ಗುಂಡ: ಯಾಕಾಗೊಲ್ಲಾ ಸಾರ್, ನಮ್ಮ ತಾತ ಚಿಕ್ಕೋರಿದ್ದಾಗ ನೆಟ್ಟಗಿದ್ದೋರು ಈಗ ಪೂರಾ ಬಗ್ಗಿಹೋಗಿದ್ದಾರೆ.

★★★

### ಅಪ್ಪನಿಗೆ ಮರ್ಯಾದೆ!

ಗುಂಡ: ಅಪ್ಪಾ ಬಾಯಿಲ್ಲಿ...
ಅಮ್ಮ: ಅಪ್ಪನನ್ನು ಹಾಗೆಲ್ಲಾ ಕರೀಬಾರ್ದು. ಮರ್ಯಾದೆಯಿಂದ ಕರೀಬೇಕು.
ಗುಂಡ: ಆಯ್ತು. ಅಪ್ಪಾ ಮರ್ಯಾದೆಯಿಂದ ಬಾ ಇಲ್ಲಿ.

(ಸಂಗ್ರಹ) **ಕೆ.ಎಸ್.ನೀತಾ, ಹಾಸನ**


